1351 (1805) ಶ್ರೀ ಮಲ್ಲಿಕಾರ್ಜುನ ಸಿದ್ರಾಮಪ್ಪ ಖೂಬಾ (ಬಸವಕಲ್ಯಾಣ) – ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ ಮತ್ತು ಆ) ರಾಜ್ಯ ಸರ್ಕಾರಕ್ಕೆ ಕಳೆದ ಮೂರು ವರ್ಷಗಳಿಂದ ವಿವಿಧ ಮೂಲಗಳಿಂದ ಬಂದಿರುವ ಆದಾಯ ಮತ್ತು ತೆರಿಗೆಯ ಮೊತ್ತವೆಷ್ಟು, ಇದೇ ಅವಧಿಯಲ್ಲಿ ಸರ್ಕಾರವು ಎಷ್ಟು ಮೊತ್ತದ ಆದಾಯ ಮತ್ತು ತೆರಿಗೆ ಸಂಗ್ರಹದ ಗುರಿಯನ್ನು ಹೊಂದಿತ್ತು ಹಾಗೂ ಯಾವ ಯಾವ ವರ್ಷಗಳಲ್ಲಿ ಗುರಿ ಸಾಧನೆಯಾಗಿದೆ,

ಇ) ಮೇಲ್ಕಂಡ ಅವಧಿಯಲ್ಲಿ ಸರ್ಕಾರವು ವಿವಿಧ ಇಲಾಖೆಗಳಿಗೆ ಮಾಡಿರುವ ವೆಚ್ಚದ ವಿವರಗಳೇನು,

ಈ) ಇದೇ ಅವಧಿಯಲ್ಲಿ ರಾಜ್ಯದ ಆರ್ಥಿಕ ಪರಿಸ್ಥಿತಿ ಲಾಭದಲ್ಲಿತ್ತೆ ಅಥವಾ ನಷ್ಟದಲ್ಲಿತ್ತೆ,

ಉ) ಈ ಅವಧಿಯಲ್ಲಿ ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ವಿವಿಧ ಯೋಜನೆಗಳಿಗಾಗಿ ಬಂದಿರುವ ಹಣದ ಮೊತ್ತವೆಷ್ಟು (ಪೂರ್ಣ ವಿವರಗಳನ್ನು ಒದಗಿಸುವುದು)

ಊ) ಈ ಅವಧಿಯಲ್ಲಿ ರಾಜ್ಯ ಸರ್ಕಾರವು ಓವರಡ್ರಾಫ್ಟ್ ಅಥವಾ ಇತರೆ ಸಂಸ್ಥೆಗಳಿಂದ ಸಾಲವನ್ನೇನಾದರೂ ಪಡೆದುಕೊಂಡಿದೆಯೇ (ವಿವರಗಳನ್ನು ಒದಗಿಸುವುದು)

ಋ) ಪಡೆದುಕೊಂಡಿದ್ದಲ್ಲಿ ಯಾವ ಕಾರಣಗಳಿಗೆ ಸೌಲಭ್ಯವನ್ನು ಪಡೆದುಕೊಳ್ಳಲಾಗಿದೆ,

ೠ) ಇದನ್ನು ಮರುಪಾವತಿ ಮಾಡಲಾಗಿದೆಯೇ? (ಪೂರ್ಣ ವಿವರಗಳನ್ನು ಒದಗಿಸುವುದು)

ಶ್ರೀ ಬಿ ಎಸ್ ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು)

ಅ ಮತ್ತು ಆ)

(ಕೋಟಿ ರೂ ಗಳಲ್ಲಿ)

	2003–04		**2004–2005**		**2005–2006**	
	ಗುರಿ	**ಸಾಧನೆ**	**ಗುರಿ**	**ಸಾಧನೆ**	**ಗುರಿ**	**ಸಾಧನೆ**
ರಾಜ್ಯ ತೆರಿಗೆ	13225 91	15814 94	18718 37	19950 76	22440 56	22844 97
ಕೇಂದ್ರ ಸರ್ಕಾರದ ಅನುದಾನಗಳು	2498 70	1986 57	2305 59	2146 56	2687 61	3632 37
ತೆರಿಗೇಯೆತರ	1713 32	2958 38	4486 35	4472 34	4090 30	3874 71

ರಾಜಸ್ವ

ಇ) ಮೇಲ್ಕಂಡ ಅವಧಿಯಲ್ಲಿ ಸರ್ಕಾರವು ವಿವಿಧ ಇಲಾಖೆಗಳಿಗೆ ಮಾಡಿರುವ ವೆಚ್ಚದ ವಿವರ ಈ ಕೆಳಕಂಡಂತಿದೆ

	2003–04	**2004–05**	**2005–06**
ಯೋಜನೆ	7380 13	10193 85	11131 02
ಯೋಜನೇತರ	17945 18	20023 11	23842 27
ಒಟ್ಟು	**25325 31**	**30216 96**	**34973 29**

ಈ) ರಾಜ್ಯದ ಆರ್ಥಿಕ ಪರಿಸ್ಥಿತಿಯನ್ನು ಮತ್ತು ನಷ್ಟದ ದೃಷ್ಟಿಯಿಂದ ನೋಡಲಾಗುವುದಿಲ್ಲ ಬದಲಾಗಿ ವಿತ್ತೀಯ ಸುಚ್ಯಾಂಕಗಳಾದ ರಾಜಸ್ವ ಕೊರತೆ/ ಹೆಚ್ಚಳ ಮತ್ತು ವಿತ್ತೀಯ ಕೊರತೆಯ ಮುಖಾಂತರ ಸೂಚಿಸಲಾಗುತ್ತದೆ

	2003–04	**2004–05**	**2005–06**
ರಾಜಸ್ವ ಕೊರತೆ (–)/ಹೆಚ್ಚಳ (+)	–524 82	1637 81	2311 15
ವಿತ್ತೀಯ ಕೊರತೆ	4501 14	3600 45	3687 00

ಉ) ಈ ಅವಧಿಯಲ್ಲಿ ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ವಿವಿಧ ಯೋಜನೆಗಳಿಗಾಗಿ ಬಂದಿರುವ ಹಣ ಈ ಕೆಳಕಂಡಂತಿದೆ 05–06ನೇ ಕಾಲಂನ ಸಾಲದ ಅಂಶದ ಅಡಿಯಲ್ಲಿರುವ ಋಣಾತ್ಮಕ ಚಿನ್ಹೆಯು, 12ನೇ ಆರ್ಥಿಕ ಆಯೋಗದ ಶಿಫಾರಸ್ಸಿನನ್ವಯ, ಕ್ರೋಢಿಕೃತ ಸಾಲದ ವರ್ಗಾವಣೆಯಿಂದಾಗಿ ಬಾಕಿಯಾದ ಸಾಲವನ್ನು ಪ್ರತಿನಿಧಿಸುತ್ತದೆ

	2003–04		**2004–05**		**2005–06**	
	ಅನುದಾನ	**ಸಾಲ**	**ಅನುದಾನ**	**ಸಾಲ**	**ಅನುದಾನ**	**ಸಾಲ**
ಯೋಜನೇತರ ಅನುದಾನ	529 85	1 98	317 49	0 55	1735 75	(–) 406 87
ಕಾರ್ಯಕ್ರಮ ಗಳಿಗೆ ಅನುದಾನ	795 58	1442 90	1036 03	1531 45	915 28	1066 12
ಕೇಂದ್ರ ಯೋಜನಾ	41 95	––	46 01	––	36 92	––

ಕಾರ್ಯಕ್ರಮಗಳಿಗೆ ಅನುದಾನ						
ಕೇಂದ್ರ ಪುರಸ್ಕೃತ ಯೋಜನಾ ಕಾರ್ಯಕ್ರಮಗಳಿಗೆ ಅನುದಾನ	619 19	12 12	747 03	23 75	944 43	9 41
ಒಟ್ಟು	**1986 57**	**1451 00**	**2146 56**	**1555 75**	**3632 37**	**668 662**

ಊ) 2003–04ನೇ ಸಾಲಿನಲ್ಲಿ ರಾಜ್ಯ ಸರ್ಕಾರ 33 ದಿನಗಳ ಕಾಲ ಓವರ್ ಡ್ರಾಫ್ಟ್ ಸೌಲಭ್ಯವನ್ನು ಪಡೆದಿತ್ತು ಆ ವರ್ಷದಲ್ಲಿ ಓವರ್ ಡ್ರಾಫ್ಟ್ ಪಡೆದ ಒಟ್ಟು ಮೊತ್ತ 757 72 ಕೋಟಿ ರೂ ಗಳು 2004–05 ಮತ್ತು 2005–06 ರಲ್ಲಿ ರಾಜ್ಯ ಸರ್ಕಾರವು ಓವರ್ ಡ್ರಾಫ್ಟ್ ಸೌಲಭ್ಯವನ್ನು ಪಡೆದಿರುವುದಿಲ್ಲ ಈ 3 ವರ್ಷಗಳಲ್ಲಿ ಇತರೆ ಸಂಸ್ಥೆಗಳಿಂದ ಹಾಗೂ ಭಾರತ ಸರ್ಕಾರದಿಂದ ಪಡೆದ ಸಾಲವನ್ನು ಈ ಕೆಳಗೆ ತೋರಿಸಲಾಗಿದೆ

ಸಂಸ್ಥೆಗಳು	**2003–04 ವಾಸ್ತವಿಕ**	**2004–05 ವಾಸ್ತವಿಕ**	**2005–06 ವಾಸ್ತವಿಕ**
ಭಾರತ ಸರ್ಕಾರದಿಂದ ಸಾಲ	1957 00	1555 75	668 65
ಬಹಿರಂಗ ಮಾರುಕಟ್ಟೆ ಸಾಲ	2778 90	2298 68	414 72
ಎಲ್ಐಸಿ, ಜಿಐಸಿ, ನಬಾರ್ಡ್ ಮತ್ತು ಎನ್‌ಸಿಡಿಸಿಯಿಂದ ಸಾಲ	870 49	268 73	252 87
ಸಣ್ಣ ಉಳಿತಾಯ ಸಂಗ್ರಹಣ ಸಾಲ	2733 05	4386 26	4327 25

ಋ) ರಾಜ್ಯವು ಅಗ್ರಿಮ ಧನದ ಮುಂಗಡವನ್ನು ಪಡೆದ ನಂತರವೂ ಋಣಾತ್ಮಕ ಶಿಲ್ಕಿನಲ್ಲಿದ್ದರೆ, ಭಾರತೀಯ ರಿಸರ್ವ್ ಬ್ಯಾಂಕು ಓವರ್‌ಡ್ರಾಫ್ಟ್ ಸೌಲಭ್ಯವನ್ನು ಒದಗಿಸುತ್ತದೆ ಇಂತಹ ಸಂದರ್ಭದಲ್ಲಿ 33 ದಿನಗಳವರೆಗೆ ಓವರ್‌ಡ್ರಾಫ್ಟ್ ಸೌಲಭ್ಯವನ್ನು ಭಾರತೀಯ ರಿಸರ್ವ್ ಬ್ಯಾಂಕು 2003–04 ರಲ್ಲಿ ಒದಗಿಸಿರುತ್ತದೆ

ಖೂ) ಸಂಸ್ಥೆಗಳಿಂದ ಮತ್ತು ಕೇಂದ್ರ ಸರ್ಕಾರದಿಂದ ಪಡೆದುಕೊಂಡ ಸಾಲಗಳನ್ನು ಆಯಾ ಸಾಲಗಳ ಷರತ್ತು ಮತ್ತು ನಿಬಂಧನೆಗೊಳಪಟ್ಟು ಬಡ್ಡಿಯ ಸಮೇತ ಮರುಪಾವತಿ ಮಾಡಲಾಗುತ್ತಿದೆ ಈ ಮೂರು ವರ್ಷಗಳಲ್ಲಿ ಸಾಲದ ಮರುಪಾವತಿ ಈ ಕೆಳಕಂಡಂತಿದೆ

	2003–04	2004–05	2005–06
1 ಕೇಂದ್ರ ಸರ್ಕಾರದಿಂದ ಪಡೆದ ಸಾಲ	3161 01	3407 59	417 70
2 ಎಲ್‌ಐಸಿ	26 83	34 78	34 73
3 ಜಿಐಸಿ	2 47	11 22	6 16
4 ಎನ್ ಸಿ ಡಿ ಸಿ	37 23	42 13	45 06
5 ನಬಾರ್ಡ್	537 83	351 13	2 45
6 ಸಣ್ಣ ಉಳಿತಾಯ	0 00	0 00	55 69
7 ಮಾರುಕಟ್ಟೆ ಸಾಲಗಳು	176 05	182 55	249 28

1352 (1374) ಶ್ರೀ ಮಾಮನಿ ವಿಶ್ವನಾಥ ಕರಬಸಪ್ಪ (ಪರಸಗಡ) – ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2006–07ನೇ ಸಾಲಿನಲ್ಲಿ ಬೆಳಗಾಂವ ಜಿಲ್ಲೆಯಲ್ಲಿ ಬರಗಾಲಪೀಡಿತ ಪ್ರದೇಶಗಳೆಂದು ಘೋಷಿಸಿದ ತಾಲ್ಲೂಕುಗಳಾವುವು, (ಪಟ್ಟಿ ನೀಡುವುದು),

ಆ) ಬರಪೀಡಿತ ತಾಲ್ಲೂಕುಗಳಲ್ಲಿ ಉದ್ಯೋಗ ಸೃಜನಾ ಕಾಮಗಾರಿಗಳನ್ನು ತೆಗೆದುಕೊಳ್ಳಲು ಬೆಳಗಾಂವ ಜಿಲ್ಲೆಗೆ ಬಿಡುಗಡೆಯಾದ ಅನುದಾನ ಎಷ್ಟು,

ಇ) ಈ ಯೋಜನೆಯಡಿ ತಾಲ್ಲೂಕುವಾರು ಹಂಚಿಕೆಯಾದ ಅನುದಾನ ಎಷ್ಟು (ಹಂಚಿಕೆ ವಿವರ ನೀಡುವುದು),

ಈ) ತಾಲ್ಲೂಕುವಾರು ತೆಗೆದುಕೊಂಡ ಕಾಮಗಾರಿಗಳಿಗಾದ ಖರ್ಚು ಮತ್ತು ಸಾಧಿಸಿದ ಪ್ರಗತಿ ಏನು?